**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 758-2021**

**ಪಿಡಬ್ಲೂ-2**

**ಸಿಡಬ್ಲೂ-2**

| | | |
|---|---|---|
| ಸಾಕ್ಷಿದಾರರ ಹೆಸರು | - | ಕಾಳಯ್ಯ |
| ತಂದೆಯ ಹೆಸರು | - | ಲೇಟ್ ಹೊನ್ನಯ್ಯ |
| ವಯಸ್ಸು | - | 75 ವರ್ಷ |
| ಕೆಲಸ | - | ವ್ಯವಸಾಯ |
| ವಾಸ | - | ಕಬ್ಬೂರು ಗ್ರಾಮ |

**ದಿನಾಂಕ 22-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಚಾಸಾ-1 ರಿಂದ 4, 8 ರಿಂದ 10 ಗೊತ್ತು. ಚಾಸಾ-5 ಮತ್ತು 6 ನನ್ನ ಮಗ ಸೊಸೆ, ಆರೋಪಿ ಗೊತ್ತಿಲ್ಲ. ಮೃತ ನಿಂಗರಾಜು ನನ್ನ ಮೊಮ್ಮಗ. ಈಗ 5 ವರ್ಷದ ಹಿಂದೆ ನನ್ನ ಮ ಮೊಮ್ಮಗ ನಿಂಗರಾಜು ಮತ್ತು ಚಾಸಾ-1 ರವರ ಜೊತೆ ಬೈಕ್ ನಲ್ಲಿ ಬರುತ್ತಿರುವಾಗ ಕಾರ್ ನಿಂದ ಅಪಘಾತವಾಗಿ ಮೃತ ಪಟ್ಟಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸಾಕ್ಷಿಯು ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಮುಂದುವರೆದ ದೂರಾಗಿದ್ದು ಅದನ್ನು **ನಿಪಿ-4** ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-3 ರಲ್ಲಿ ತೋರಿಸಿರುವ ಬೈಕ್ ನ ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ದಿಃ 06-03-2020 ರಲ್ಲಿ ಚಾಸಾ-1 ಮತ್ತು ನನ್ನ ಮೊಮ್ಮಗ ಮೃತ ನಿಂಗರಾಜು ಅವರ ನೋಂದಣಿಯಾಗದ ಬೈಕ್ ನಲ್ಲಿ ಕೆ ಆರ್. ನಗರಕ್ಕೆ ಬಂದಿರುತ್ತೇವೆ ಎಂದರೆ ಸರಿ. ಸಂಜೆ 4.00 ಗಂಟೆ ಸಮಯಕ್ಕೆ ಕೆ ಆರ್ ನಗರದಿಂದ ಕಬ್ಬೂರಿಗೆ ಹೊರಟಿರುತ್ತೇವೆ ಎಂರದೆಸರಿ. ಅವರು ಮಂಚನಹಳ್ಳಿಯ ಬಳಿಯ ರೈಸ್ ಮಿಲ್ ಬಳಿ ಹೋಗುತ್ತಿದ್ದಾಗ ಚಾಸಾ-1 ರವರು ಹಿಂಬದಿಯ ಸವಾರನಾಗಿ ಹೋಗುತ್ತಿದ್ದು ಸದರಿ ಬೈಕ್ ನ್ನು ನನ್ನ ಮೊಮ್ಮಗ ಚಲಾಯಿಸುತ್ತಿದ್ದ ಎಂದರೆ ಸರಿ. ನಮ್ಮ ಎದುರುಗಡೆಯಿಂದ ಒಂದು ಕಾರು ಸಂಖ್ಯೆ ಕೆಎ-45-ಎಮ್ 1366 ಸ್ಯಂಟ್ರೋ ಕಾರ್ ಚಾಲಕ ಅದನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೂಂಡು ಬಂದು ನಮ್ಮ ಮೊಮ್ಮಗ ಚಲಾಯಿಸುತ್ತಿದ್ದ ಬೈಕ್ ಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿ.

ನಂತರ ಚಾಸಾ-1 ರವರು ಮತ್ತು ನನ್ನ ಮೊಮ್ಮಗ ನಿಂಗರಾಜು ಬೈಕ್ ಸಮೇತ ಕೆಳಕ್ಕೆ ಬಿದ್ದಿರುತ್ತೇವೆ ಎಂದರೆ ಸರಿ. ಸದರಿ ಅಪಘಾತದಲ್ಲಿ ಚಾಸಾ-1 ರವರವರಿಗೆ ಬಲಗಾಲು ಮಂಡಿ ಮತ್ತು ಮೊಣಕಾಲಿಗೆ ಪೆಟ್ಟಗಿರುತ್ತದೆ ಎಂದರೆ ಸರಿ. ಅದೇ ರೀತಿ ಮೃತ ನಿಂಗರಾಜುಗೆ ತಲೆಗೆ ಮತ್ತು ಕಾಲಿಗೆ ಪೆಟ್ಟಾಗಿರುತ್ತದೆ ಎಂದರೆ ಸರಿ. ನಂತರ ಚಾಸಾ-3 ಮತ್ತು 4 ರವರು ಅವರನ್ನು ಸುಧಾರಿಸಿ ಕೆ ಆರ್ ನಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿರುತ್ತಾರೆ ಎಂದರೆ ಸರಿ. ನಂತರವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗಾಗಿ ಆ್ಯಂಬುಲೇನ್ಸ ನಲ್ಲಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ತೆರಳಿ ಅಲ್ಲಿ ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದಿರುತ್ತೆನೆ ಎಂದರೆ ಸರಿ.

ನಂತರ ಮೃತ ನಿಂಗರಾಜುರವರನ್ನು ಬೆಂಗಳೂರಿನ ನಿಮಾನ್ಸಗೆ ತೋರಿಸಿ ನಂತರ ಮೈಸೂರಿನ ಡಿ ಆರ್ ಎಮ್ ಆಸ್ಪತ್ರೆಗೆ ತೋರಿಸಿ ಚಿಕಿತ್ಸೆಯನ್ನು ಕೊಡಿಸಿರುತ್ತಾರೆ ಎಂದರೆ ಸರಿ. ನಂತರ ದಿಃ 08-03-2020 ರಂದು ಮದ್ಯಾಹ್ನ 1.15 ಗಂಟೆ ಸಮಯದಲ್ಲಿ ಮೃತ ನಿಂಗರಾಜು ನನ್ನಮೊಮ್ಮಗ ಚಿಕಿತ್ಸೆ ಫಲಕಾರಿಯಾಗದೇ ಮೃತ ಪಟ್ಟಿರುತ್ತಾರೆ

ಎಂದರೆ ಸರಿ. ನಾನು ದಿಃ 08-03-2020 ರಂದು ಸಂಜೆ5.30 ಗಂಟೆ ಸಮಯದಲ್ಲಿ ಮುದುವರೆದ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಶ್ರೀ ಬಿ ಎಸ್ ಎಸ್ ಆರೋಪಿ ಪರ ವಕೀಲರು ಃ**

ನನ್ನ ಮೊಮ್ಮಗ ಮೃತ ನಿಂಗರಾಜು ನಮಗೆ ಎಲ್ಲಿಗೆ ಹೋಗುತ್ತೇನೆ ಎಂದು ಹೇಳಿ ಹೋಗಿರಲಿಲ್ಲ. ನನಗೆ ಅಪಘಾತದ ಬಗ್ಗೆ ಜನ ಹೇಳಿರುತ್ತಾರೆ. ನಂತರ ನಾನು ನೇರವಾಗಿ ಆಸ್ಪತ್ರೆಗೆ ಹೋಗಿರುತ್ತಾರೆ. ನಿಪಿ-4 ರಲ್ಲಿ ಏನು ಬರೆದಿದೆ ಮತ್ತು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆ - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

**(ಚಂದನ ಎಸ್ )**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ